23. ಬಿಡದಿಯ ಲ್ಲಿರುವ ಟ್ಯಾವಲರ್ಸ್ ಬಂಗ್ಲೆಗೆ ಸೇದ ಮುನಸಿಫರುಖಾನೆಗೆ ಬಪೇರ ವಿಚಾರದಲ್ಲಿ ಎಕ್ಸಿಕ್ಯೂಟಿವ್ ಇಂಜನೀಯರ್ ಬರಿಸಿದ 1—5—07ನೆ ಮುಕ್ಕಂ 1973-560ನೆ ನಂಬರು ಡಾಕ್ಯೇಟು ಓದಲಾಯಿತು.

ಈ ಕಟ್ಟಡ ಮುನಸಿಫರುಖಾನೆ ಎಂದು ಹೇಳಲು ವಿನಾ ಬೇರಾರ್ಥ ಇಲ್ಲವಾಗಿಯೂ ಆದರೆ ಪೋಲ್ಡರ್ ಗುಡಿಸಲೆಂಬದಾಗಿ ಶಿಳಿಯ ಬರುತ್ತೆಯಾಗಿ ಈ ಕಟ್ಟಡವನ್ನು ವಡೆದುಹಾಕಿ ಸಾಮಾನುಗಳನ್ನು ಹರಾಜು ಹಾಕಿ ಆ ಮೊಬಲಗು ವಡದು ಹಾಕಿದ್ದಕ್ಕೆ ತಗಲುವ ಖರ್ಚಿಗೆ ಉಪಯೋಗಿಸಿಕೊಳ್ಳಬೇಕೆಂದು ತೀರ್ಮಾನವಾಯಿತು.

24. ದೊಡ್ಡಬಳ್ಳಾಪುರದ ತಾಲ್ಲೂಕು ಜೊಕ್ಕನಹಳ್ಳಿಲಿ ಭೂವಿತೆಗೆಸತಕ್ಕ ಭಾಗದಲ್ಲಿ ದೊಡ್ಡಬಳ್ಳಾಪುರದ ಸಬ್ ಡಿವೀಜನ್ ಆಫೀಸರು ಬರೆಸಿದ 1—5-07ನೆ ಮುಕ್ಕಂ 1207ನೆ ಯಾದಿ ಓದಲಾಯಿತು.

ಈ ಕಾಮಗಾರಿಯು ಸಾಲಿನಲ್ಲಿ ಪೂರೈಸಲು ಕಾಲವಿಲ್ಲವಾಗ ಸಧ್ಯಕ್ಕೆ ಈ ಕೆಲಸ ಹಾಗೇ ಇರಬೇಕೆಂದು ತೀರ್ಮಾನ ಮಾಡಲಾಯಿತು.

25. ಹೊಸಕೋಟೆ ತಾಲ್ಲೂಕು ಹಿಂಡಿಗನಾಳು ಸಂತೆಲಿ ತಿರುಗುವ ವ್ಯಾಪಾರಸ್ಥರಿಂದ ಅಂಗಡಿ ತೆರಿಗೆ ವಸೂಲ್ಮಾಡಲು ಗುತ್ತಿಗೆ ಕೊಡಿಸಬೇಕೆಂದು ಚಿಕ್ಕಬಳ್ಳಾಪುರದ ತಾಲ್ಲೂಕು ಅಂದ್ರಹಳ್ಳಿ ಮಹೆಬ್ಬೂದು ಇವರು ಬರದುಕೊಂಡ ಅರ್ಜಿ ವಿಚಾರದಲ್ಲಿ ಬೆಂಗಳೂರು ಸಬ್ ಡಿವಿಜನ್ ಆಫೀಸರವರಿಂದ ತಲ್ಪಿದ 22 4—07ನೆ ಮುಕ್ಕಂ 943ನೆ ನಂಬರು ಯಾದಿ ಓದಲಾಯಿತು.

ಹಿಂಡಿಗನಾಳು ಮುನಿಸಿಪಾಲಿಟಿಯು ಅಲ್ಲಿಯೂನಿರ್ಯಾ ಆಲ್ಲ ಆದ್ದರಿಂದ ಈ ತೆರಿಗೆ ವಸೂಲ್ಮಾಡಲು ಕೂಡದಂತಲೂ ಈತನ ಅರ್ಜಿ ತಿರಸ್ಕರಿಸಿರವದಾಗಿಯೂ ತೀರ್ಮಾನವಾಯಿತು.

ಮುಂದಿನ ವಿಾಟಿಂಗು ಆಗಸ್ಟು 15ಕ್ಕೆ ಯಂತ ತೀರ್ಮಾನವಾಯಿತು.

ಹೆಚ್. ಹೆಚ್. ಸ್ಪಾರ್ಕ್ಸ್.
ಪ್ರೆಸಿಡೆಂಟ್.

ಶಿವಮೊಗ್ಗ ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟ್‌ನಲ್ಲಿ.

ಸ|| 1906—07ನೆ ಇಸವಿ ದಿವಾಳಿ ಕೇಸ್ ನಂಬರ್ 93.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೆ ಅಧ್ಯಾಯದಲ್ಲಿ ನವೂದಾಗುವ ವಿಷಯವಲ್ಲಿಯೂ ಮತ್ತು ತರೀಕೆರೆಯ ವಾಸಸ್ಥರಾದ ಹಾಲಿ ತರೀಕೆರೆಯಲ್ಲಿ ಇರುವ ಜಿಗಣೆಖಾ ಹಯಾತ್ ಖಾ ಸಾಹೇಬರ ಅರ್ಜಿಯ ವಿಷಯದಲ್ಲಿಯೂ ಸಬ ಮೇಲ್ಕಂಡ ಅರ್ಜೀದಾರರು ಸ|| 1907ನೆ ಇಸವಿ ಮಾರ್ಚಿ 12ನೆ ತಾರೀಖಿನಲ್ಲಿ ಈ ಕೋರ್ಟಿಗೆ ಅರ್ಜಿ ಕೊಟ್ಟು ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೆ ಅಧ್ಯಾಯದಲ್ಲಿ ನವೂದಾಗುವ ಉದಹರಣೆಗಳ ಪ್ರಯೋಜನವನ್ನು ಹೊಂದುವದರ ಮೂಲಕ ಸದರಿ ಕೋಡಿ 351ನೆ ಸೆಕ್ಷನ್ ಪ್ರಕಾರ ದಿವಾಳಿಯಾವವರೆಂಬದಾಗಿ ಅಪ್ಪಣೆ ಆಗಬೇಕೆಂದು ಕೋರಿಕೊಂಡಿರುವದರಿಂದ ಸ|| 1907ನೆ ಇಸವಿ ಆಗಸ್ಟು ತಾರೀಖು 16 ಹದಿನಾರನೆ ಶುಕ್ರವಾರ ದಿವಿ 11 ಘಂಟೆಗೆ ಸದರಿ ಹಯಾತ್ ಖಾ ಸಾಹೇಬರ ಅರ್ಜಿ ವಿಷಯ ದರ್ಯಾಪ್ತಿ ಮಾಡಲ್ಪಡುವದರಿಂದ ಆ ಕಾಲದಲ್ಲಿ ಅರ್ಜಿದಾರರು ಕೋರ್ಟು ರೂಬರೂ ಖುದ್ದು ಹಾಜರಾಗಿ ಕೋರ್ಟಿನವರು ಅವರ ವಿಷಯವಾಗಿ ಹುಕುಂ ಮಾಡುವ ಮೇರಿಗೆ ಅವರ ವಡನೆ ನಡದ್ದುಕೊಳ್ಳತಕ್ಕದ್ದೆಂತಲೂ ಮತ್ತು ವಿಜ್ಞ ಈ ಕೆಳಗೆ ನವೂದಿಸುವ ಲೇಹೇದಾರರು ಹಾಜರಾಗಿ ಅವರ ಕೋರಿಕೆಯನ್ನು ಅಕ್ಷೇಪಿಸುವುದಕ್ಕೆ ಸ್ವತಂತ್ರರಾಗಿರುತ್ತಾರೆಂದು ಈ ಮೂಲಕ ನೋಟೀಸ್ ಕೊಡಲ್ಪಟ್ಟು ಇರುತ್ತದೆ.

ಸ|| 1907ನೆ ಇಸವಿ ಜೂನ್ 29ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತು ನಿನ ಕೊಡಲ್ಪಟ್ಟು ಇದೆ.

ಲೇಹೇದಾರು:

1. ಶಿದ್ಯಾಮಂಣನ ಶಿದ್ದಂಣ.
2. ವಂಗ್ಲೂರು ಮಾರ್ಗಂ ಅಂಡರ್ಸನ್ಸ್.
3. ತರೀಕೆರೆ ತಾಲ್ಲೂಕು ನಂದಿಬಟ್ಲು ಕುಳ್ಳಿ ಗೌಡರು.
4. ತರೀಕೆರೆಯಲ್ಲಿರುವ ಜವಳಿಅಂಗಡಿ ಶೀರ್ಯದ ಹುಸೇನ್ ಸಾಹೇಬರು.
5. ಡಿಟೋ ಸ್ಥಳದ ದಾವಣಗೆರೆ ಮುರಿಗೆಪ್ಪನ ರುದ್ರಪ್ಪನ ಹೆಂಡತಿ ಪರವ್ವ.
6. ಡಿಟೋ ಸ್ಥಳದ ಶಿಕಲಗಾರ ಅಬ್ದುಲ್ ರಜಾಕ್ ಸಾಹೇಬರ ಮಕ್ಕಳು ಅಬ್ದುಲ್‌ಖಾದರ್, ಖಾದರ್‌ಮೊಹದ್ದೀ, ದಸ್ತಗಿರಿ ಸಾಹೆಬರು.
7. ಡಿಟೋ ಸ್ಥಳದ ಅರ್ಜಿದಾರನ ಹೆಂಡತಿ ಮಹಬೂಬ್‌ಬಿ ಯವರು.
8. ಕೊಪ್ಪದಲ್ಲಿರುವ ಮೂರಿಸ್ ಲೆಂಬೊ.
9. ಶಿವಮೊಗ್ಗ ತಾಲ್ಲೂಕು ಆಯನೂರಲ್ಲಿರುವ ಸಾಹುಕಾರ್ ಪುಸ್ಯಾಸಾಹೇಬರ ಮಕ್ಕಳು ಅಬ್ದುಲ್‌ಕರೀಂ ಸಾಬರು.
10. ತರೀಕೆರೆ ತಾಲ್ಲೂಕು ನಂದಿಬಟ್ಲನಲ್ಲಿರುವ ಕಾಫಿಪ್ಲಾಂಟರ್ ಬೈರಕಟ್ಟೆ ಕರಿಯಂಣನವರು.
11. ದಾವಣಗೆರೆಯಲ್ಲಿರುವ ರುದ್ರಪ್ಪನ ಹೆಂಡತಿ ರುದ್ರವ್ವನವರು.
12. ದಾವಣಗೆರೆಯಲ್ಲಿರುವ ಹುಡಿಕೊಂಡಿ ಮುರಿಗೆಪ್ಪನವರ ಮಗ ಗಡ್ಲಪ್ಪನವರು.
13. ಸೇಲಂ ಜಿಲ್ಲಾ ತಿರುಪತ್ತೂರಿನಲ್ಲಿರುವ ಹುಸೇನ್ ಮೊಹದ್ದಿ ಸಾಹೇಬರು.

ಆರ್. ಬಿ. ಪೈಂಮರ್,
ಡಿಸ್ಟ್ರಿಕ್ಟ್ ಜಡ್ಜ್.